ಭಾಷಾ ಮಕ್ಕಳಿಗೂ ಈ ಯೋಜನೆಯು ಅನ್ವಯಿಸುತ್ತದೆ. ಈ ಯೋಜನೆಗಾಗಿ 2001-02ರಲ್ಲಿ ರೂ. 15.00 ಕೋಟಿ ಮತ್ತು 2002 -03 ರಲ್ಲಿ ರೂ. 45.00 ಕೋಟಿಗಳನ್ನು ಮೀಸಲಿಡಲಾಗಿದೆ.

ಅ) ರಾಜ್ಯದ ಈಶಾನ್ಯ ಭಾಗದ 7 ಜಿಲ್ಲೆಗಳ ಪೈಕಿ ರಾಯಚೂರಿನಲ್ಲಿ 05 ತಾಲ್ಲೂಕುಗಳು, ಬಿಜಾಪುರದಲ್ಲಿ 06 ತಾಲ್ಲೂಕುಗಳಲ್ಲಿ, ಬಾಗಲಕೋಟೆಯಲ್ಲಿ 06 ತಾಲ್ಲೂಕುಗಳಲ್ಲಿ, ಬಳ್ಳಾರಿಯ 07 ತಾಲ್ಲೂಕುಗಳಲ್ಲಿ, ಬೀದರ್‌ನ 05 ತಾಲ್ಲೂಕುಗಳಲ್ಲಿ, ಕೊಪ್ಪಳದ 04 ತಾಲ್ಲೂಕುಗಳಲ್ಲಿ ಹಾಗೂ ಗುಲ್ಬರ್ಗಾದ 06 ತಾಲ್ಲೂಕುಗಳಲ್ಲಿ ಬಿಸಿ ಊಟದ ಕಾರ್ಯಕ್ರಮವು ಪ್ರಾರಂಭವಾಗಿರುತ್ತದೆ.

ಆ) ಇಲ್ಲ.

ಈ) ಹೌದು.

ಉ) ಇಲ್ಲ.

ರಾಜ್ಯದ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಲೆಕ್ಕಶೀರ್ಷಿಕೆ ವರ್ಗಾವಣೆ

498(792) -ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಅನುದಾನಗಳನ್ನು ಒಂದು ಲೆಕ್ಕಶೀರ್ಷಿಕೆಯಿಂದ ಮತ್ತೊಂದು ಲೆಕ್ಕಶೀರ್ಷಿಕೆಗೆ ಸರ್ಕಾರದ ಅನುಮತಿ ಇಲ್ಲದೆಯೇ ವರ್ಗಾವಣೆ ಮಾಡಲಾಗಿದೆ; ವರ್ಗಾವಣೆ ಮಾಡಲು ಕಾರಣ ಏನು; ವಿವರ ನೀಡುವುದು;

ಆ) ಸರ್ಕಾರ ಬಿಡುಗಡೆಗೊಳಿಸಿದ ಅನುದಾನಕ್ಕಿಂತ ಹೆಚ್ಚಿನ ಹಣವನ್ನು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯಲ್ಲಿ ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮ ಏನು; ಯಾವ ಯಾವ ಜಿಲ್ಲಾ ಪಂಚಾಯಿತಿಯಲ್ಲಿ ಯಾರ ಯಾರ ಮೇಲೆ ಕ್ರಮಕೈಗೊಳ್ಳಲಾಗಿದೆ ತಿಳಿಸುವುದು; ಅಧಿಕಾರಿಗಳ ಪದನಾಮ ಸಹಿತ ವಿವರ ನೀಡುವುದು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ಯ ಸಚಿವರು):

ಅ) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಸೆಕ್ಷನ್ 257 (ಎ) ದನ್ವಯ, ಆರ್ಥಿಕ ವರ್ಷದಲ್ಲಿ, ಜಿಲ್ಲಾ ಪಂಚಾಯತಿಯು, ಜಮೆಗಳ ಬಗ್ಗೆ ಅಥವಾ ಅದು ಕೈಗೊಳ್ಳುವ ವಿವಿಧ ಸೇವೆಗಳ ಬಗ್ಗೆ ವೆಚ್ಚ ಮಾಡಬೇಕಾದ ಮೊಬಲಗುಗಳ ಹಂಚಿಕೆಯ ಬಗ್ಗೆ, ಬಜೆಟ್‌ನಲ್ಲಿ ಮಾಡಿದ ಏರ್ಪಾಡುಗಳನ್ನು ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದರೆ ಅದು ಜಿಲ್ಲಾ ಪಂಚಾಯ್ತಿಯ ಯಾವುದೇ ಅಭಿವೃದ್ಧಿ ಕಾರ್ಯಗಳಿಗಾಗಿ ಅನುಮೋದಿಸಿದ ಅನುದಾನಗಳಲ್ಲಿ ಶೇಕಡ 10 ರವರೆಗೆ ಅಂಥಹ ಮಾರ್ಪಾಡನ್ನು ಮಾಡಬಹುದಾಗಿದೆ. ಶೇಕಡ 10ಕ್ಕಿಂತ ಹೆಚ್ಚಿನ ಮಾರ್ಪಾಡಿಗೆ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ. ಅದರನ್ವಯ 2001-02 ನೇ ಸಾಲಿನಲ್ಲಿ ಕೆಲವೊಂದು ಲೆಕ್ಕಶೀರ್ಷಿಕೆಗಳಡಿಯ ಹೆಚ್ಚುವರಿ ಬೇಡಿಕೆಯನ್ನು ಭರಿಸಲು ಕೆಳಕಾಣಿಸಿದ 11 ಜಿಲ್ಲಾ ಪಂಚಾಯತ್‌ಗಳು ಶೇಕಡ 10ಕ್ಕಿಂತ ಹೆಚ್ಚಿನ ಮಾರ್ಪಾಡುಗಳಿಗೆ ಸರ್ಕಾರದ (ಆರ್ಥಿಕ ಇಲಾಕೆಯ) ಅನುಮೋದನೆಯನ್ನು ಪಡೆದಿರುತ್ತವೆ.

1. ಬೆಂಗಳೂರು (ಗ್ರಾಮಾಂತರ), 2. ಚಿತ್ರದುರ್ಗ, 3. ತುಮಕೂರು, 4. ಮೈಸೂರು, 5. ಹಾಸನ, 6. ಮಂಡ್ಯ, 7. ಬೆಳಗಾವಿ, 8. ಧಾರವಾಡ, 9. ಗುಲ್ಬರ್ಗಾ, 10. ರಾಯಚೂರು ಮತ್ತು 11.ಹಾವೇರಿ.

ಆ. 2001-02ನೇ ಸಾಲಿನಲ್ಲಿ 4 ಜಿಲ್ಲಾ ಪಂಚಾಯತ್‌ಗಳು ಸರ್ಕಾರ ಬಿಡುಗಡೆಗೊಳಿಸಿದ ಅನುದಾನಕ್ಕಿಂತ ಹೆಚ್ಚಿನ ಹಣವನ್ನು ಕೆಲವೊಂದು ಲೆಕ್ಕಶೀರ್ಷಿಕೆಗಳಡಿಯಲ್ಲಿ ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಧಿಕಾರಿಗಳ ಪದನಾಮ ಮತ್ತು ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧ - 1 ರಲ್ಲಿ ನೀಡಿದೆ.

ಅನುಬಂಧ - 1

2001-2002 ನೇ ಸಾಲಿನಲ್ಲಿ ಸರ್ಕಾರ ಬಿಡುಗಡೆಗೊಳಿಸಿದ ಅನುದಾನಕ್ಕಿಂತ ಕೆಲವೊಂದು ಲೆಕ್ಕಶೀರ್ಷಿಕೆಗಳಡಿಯಲ್ಲಿ ಹೆಚ್ಚಿನ ಹಣವನ್ನು ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಖರ್ಚು ಮಾಡಿರುವ ಬಗೆಗಿನ ವಿವರಗಳು.

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್	ಅಧಿಕಾರಿಗಳ ಪದನಾಮ	ಕೈಗೊಂಡ ಕ್ರಮ
1.	ಉಡುಪಿ	1. ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾಧಿಕಾರಿ.	
		2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ	
		3. ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ	
		4. ಸಹಾಯಕ ನಿರ್ದೇಶಕರು, ಜಿಲ್ಲಾ ಪಂಚಾಯತ್ ಮಿನುಗಾರಿಕೆ ಇಲಾಖೆ	ಹೆಚ್ಚುವರಿ ವೆಚ್ಚ ಕುರಿತು ಸೂಕ್ತ
		5. ಉಪನಿಬಂಧಕರು, ಸಹಕಾರ ಇಲಾಖೆ.	ಸ್ಪಷ್ಟೀಕರಣ ಕೇಳಲಾಗಿದೆ.
		6. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ.	
		7. ಜಿಲ್ಲಾಧಿಕಾರಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ.	
		8. ಯೋಜನಾ ಸಮನ್ವಯಾಧಿಕಾರಿ, ಐ.ಟಿ.ಡಿ.ಪಿ	

1	2	3	4
2.	ದಾವಣಗೆರೆ	1. ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ	
		2. ಜಂಟಿ ನಿರ್ದೇಶಕರು, ಕೃಷಿ ಇಲಾಖೆ	ವೇತನ ಮತ್ತು ಕಾರ್ಯಕ್ರಮ ದಡಿ ಹೆಚ್ಚುವರಿ ವೆಚ್ಚವಾಗಿದ್ದು ಸ್ಪಷ್ಟೀಕರಣ ಕೇಳಲಾಗಿದೆ.
		3. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ	
		4. ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.	ಹೆಚ್ಚುವರಿ ವೆಚ್ಚವನ್ನು ಅನಿವಾರ್ಯ ಬಾಬ್ತಿಗೆ ಅಂದರೆ ವೇತನಕ್ಕಾಗಿ ಮಾಡಲಾಗಿದೆ.
3.	ಚಾಮರಾಜನಗರ	1. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ	
		2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ.	
		3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ.	
		4. ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ	
		5. ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.	ಹೆಚ್ಚುವರಿ ವೆಚ್ಚವನ್ನು ಅನಿವಾರ್ಯ ಬಾಬ್ತಿಗೆ ಅಂದರೆ
		6. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ.	ವೇತನಕ್ಕಾಗಿ ಮಾಡಲಾಗಿದೆ.
		7. ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ.	
		8. ಉಪ ನಿರ್ದೇಶಕರು, ರೇಷ್ಮೆ ಇಲಾಖೆ	

1	2	3	4
		9. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ.	
4.	ಕೋಲಾರ	1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ.	
		2. ಉಪ ಅರಣ್ಯ ಸಂರಕ್ಷಣಾಧಿಕಾರಿ. ಕುಟುಂಬ ಕಲ್ಯಾಣಾಧಿಕಾರಿ.	ಹೆಚ್ಚುವರಿ ವೆಚ್ಚವನ್ನು ಬಾಬ್ತಿಗೆ ಅಂದರೆ ವೇತನಕ್ಕಾಗಿ ಮಾಡಲಾಗಿದೆ.
		3. ಸಹಾಯಕ ನಿರ್ದೇಶಕರು, ರೇಷ್ಮೆ ಕೈಮಗ್ಗ, ಖಾದಿ	

ದೊಡ್ಡಬಳ್ಳಾಪುರ ನಗರ ಮತ್ತು ತಾಲ್ಲೂಕಿನ ಆಸ್ಪತ್ರೆಗಳಿಗೆ ಔಷಧ ಮತ್ತು ಉಪಕರಣಗಳ ಸರಬರಾಜು

499(439) -ಶ್ರೀ ವಿ ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ನಗರ ಮತ್ತು ತಾಲ್ಲೂಕಿನ ಆಸ್ಪತ್ರೆಗಳಲ್ಲಿ ಔಷಧಿ ಮತ್ತು ವೈದ್ಯಕೀಯ ಉಪಕರಣಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವಾಗ ನಿವಾರಿಸಲಾಗುವುದು;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಜನ ಮೆಚ್ಚಿದ ಶಿಕ್ಷಕರು

500(440) -ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನ ಮೆಚ್ಚಿದ ಶಿಕ್ಷಕರನ್ನು ಆಯ್ಕೆ ಮಾಡಲು ಸರ್ಕಾರದ ನೀತಿ ನಿಯಮಗಳೇನು? ಇವರನ್ನು ಆಯ್ಕೆ ಮಾಡುವವರು ಯಾರು?

ಆ) 2001-02ನೇ ಸಾಲಿನಲ್ಲಿ ಜನಮೆಚ್ಚಿದ ಶಿಕ್ಷಕರನ್ನು ಆಯ್ಕೆ ಮಾಡುವಾಗ ತಾಲ್ಲೂಕು ಮಟ್ಟದಲ್ಲಿ ನಡೆದಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?